ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ದಿನಾಂಕ ೨೨ನೇ ಫೆಬ್ರವರಿ ೧೯೮೯, ಫಾಲ್ಗುಣ ಶು. ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯–೦೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಪೀಠವನ್ನು ಅಲಂಕರಿಸಿದ್ದರು.]

ಕಾಂಗ್ರೆಸ್ (ಐ) ಪಕ್ಷದ ಸದಸ್ಯರಿಂದ ಧರಣಿ

(ಕಾಂಗ್ರೇಸ್ ಐ 'ಪಕ್ಷದ' ಸದಸ್ಯರು ಧರಣಿ ಕುಳಿತಿದ್ದರು)

(ಗೊಂದಲ)

ಅಧ್ಯಕ್ಷರು.—ತಾವು ಸ್ವಲ್ಪ ಕೇಳಿ. ಇವತ್ತು ೨೭ ಪ್ರಶ್ನೆಗಳು ಇವೆ. ೭ ಗಮನ ಸೆಳೆಯುವ ಸೂಚನೆಗಳು ಇವೆ. ನಿಯಮ ೩೫೪ ರದ್ದು ೩೫೫ ಇವೆ. ಶ್ರೀಮತಿ ನಾಗರತ್ನಮ್ಮನವರು ಸಹ ಈ ಪೀಠದಲ್ಲಿ ಕುಳಿತು ೬ ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ತಾವೆಲ್ಲ ದಯವಾಡಿ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ. ನಾನು ತಮಗೆ ಕಾಲಾವಕಾಶವನ್ನು ಮಾಡಿ ಕೊಡುತ್ತೇನೆ. ತುಂಬಾ ಕಾರ್ಯಕಲಾಪಗಳಿವೆ. ದಯವಾಡಿ ತಮ್ಮ, ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಪುನಃ ಹೇಳುತ್ತೇನೆ ಎಲ್ಲಾ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳಿ.

(ಕಾಂಗ್ರೇಸ್ ಐ 'ಪಕ್ಷದ' ಮಾನ್ಯ ಸದಸ್ಯರುಗಳು ಘೋಷಣೆಗಳನ್ನು ಕೂಗುತ್ತಿದ್ದರು)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಇದರ ಬಗ್ಗೆ ಸಿ.ಬಿ.ಐ. ಎನ್‌ಕ್ವೈರಿ ಆಗಬೇಕು.

ಅಧ್ಯಕ್ಷರು.—ನೋಡಿ ಇವತ್ತು ೭ ಕಾಲಿಂಗ್ ಅಟೆನ್‌ಷನ್ ಇವೆ. ಮುನ್ನೂರರ ಮೇಲಪತ್ನಾಲ್ಕರ ಮೇಲಿನ ವಿಷಯ ೩೫೫ ಇವೆ.

ಶ್ರೀ ಆರ್, ವಿ. ದೇಶಪಾಂಡೆ.—ತಮ್ಮ ಮುಖಾಂತರ ವಿರೋಧಪಕ್ಷದ ಮಾನ್ಯ ಸದಸ್ಯರುಗಳಿಗೆ ತಮ್ಮ ತಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಂಡು ಕಾರ್ಯಕಲಾಪ ನಡೆಸುವುದಕ್ಕೆ ಸಹಕರಿಸಬೇಕೆಂದು ಬಹಳ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಇವತ್ತು ಸಾಕಷ್ಟು ಮಹತ್ವದ ವಿಚಾರಗಳಿವೆ.

ಶ್ರೀ ಎನ್. ಎಂ. ಅಡ್ಯಂತಾಯ.—ಇವರು ಹೇಳುವುದಕ್ಕಿಂತ ದೊಡ್ಡ ಮಹತ್ವದ ವಿಷಯ ಇದಾಗಿದೆ.

ಅಧ್ಯಕ್ಷರು.—ನೀವು ಹೇಳಿದ್ದಾಯಿತು. ಈಗ ಅವರು ಏನು ಹೇಳುತ್ತಾರೋ ಕೇಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಕಾಂಗ್ರೆಸ್ ಪಕ್ಷದ ಮಿತ್ರರುಗಳು ದಯವಿಟ್ಟು ಸೀಟುಗಳಿಗೆ ಬರಬೇಕೆಂದು ಕೇಳಿಕೊಳ್ಳುತ್ತೇನೆ.

(ಸರ್ಕಾರದ ವಿರುದ್ಧ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ವೆಲ್‌ನಲ್ಲಿ ನಿಂತುಕೊಂಡು ಜೋರಾಗಿ ಘೋಷಣೆಗಳನ್ನು ಕೂಗುತ್ತಿದ್ದರು.)

ಪ್ರೊ. ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರುಗಳು ಅವರ ಅಭಿಪ್ರಾಯಗಳನ್ನು ಹೇಳಿದ್ದಾರೆ. ಪಂತ್ರು ಅವರ ಪ್ರತಿಭಟನೆಯನ್ನು ತೋರಿಸಿದ್ದಾರೆ. ಈಗ ಅವರು ಧರಣಿ ಮಾಡುತ್ತಿರುವುದು ಸತ್ಸಂಪ್ರದಾಯವಲ್ಲ. ಈ ಸಭೆಯ ಕಾರ್ಯಕಲಾಪಗಳನ್ನು ಸ್ಥಗಿತಗೊಳಿಸುವುದು ಸತ್ಸಂಪ್ರದಾಯವಲ್ಲ ಮಾನ್ಯ ಸದಸ್ಯರುಗಳು ತಮ್ಮ ಜಾಗದಲ್ಲಿ ಹೋಗಿ ಕುಳಿತುಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ ಕಾರ್ಯಕಲಾಪಗಳು ಸರಿಯಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಮಾನ್ಯ ಬೊಮ್ಮಾಯಿಯವರು ತಾವು ಹೇಳಿ.....

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಉತ್ತರ ಕೊಡುವುದಕ್ಕೆ ಅವಕಾಶ ಇಲ್ಲದಿದ್ದರೆ ಹೇಗೆ? ಮುಖ್ಯಮಂತ್ರಿಯಾಗಿ ನಾನು ನಿಮಗೆ ಉತ್ತರವನ್ನು ಕೊಡಬೇಕಲ್ಲ Ultimately I have to reply. I appeal to them to go back to their respective seats.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ.....

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಮಾರು ಆರು ಗಂಟೆಗಳ ಕಾಲ ನೀವುಗಳು ಇದನ್ನು ಮಾತನಾಡಿದ್ದೀರಿ...

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಉತ್ತರ ಹೇಳಲು ಅವಕಾಶ ಮಾಡಿಕೊಡಿ.

(ಗೊಂದಲ)

ನೀವು ಹೇಳಿದ ಹಾಗೆ ನಾನು ಕೇಳಬೇಕೆ? ನಿಮಗೆ ಸತ್ಯವನ್ನು ಎದುರಿಸುವುದಕ್ಕೆ ಧೈರ್ಯ ಇಲ್ಲವೇ

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ರಾಜ್ಯದಲ್ಲಿ ಲಕ್ಷಾಂತರ ರೈತರು ತೊಂದರೆಗೆ ಒಳಗಾಗಿದ್ದಾರೆ, ಅವರ ಸಮಸ್ಯೆಗಳತ್ತ ಯಾರಿಗೂ ಯೋಚನೆ ಇಲ್ಲವೆ? ಅವರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ.....

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಮಾನ್ಯ ವಿರೋಧ ಪಕ್ಷದ ಸ್ನೇಹಿತರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ, ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕಲಾಪಗಳನ್ನು ಮುಂದುವರಿಸಲು ಸಹಕರಿಸಬೇಕು. ಅದನ್ನು ಬಿಟ್ಟು ಇಲ್ಲಿ ಈ ರೀತಿಯಲ್ಲಿ ಪ್ರತಿನಾಡುವುದು ಸೌಜನ್ಯವೂ ಅಲ್ಲ, ಮತ್ತು ಸರಿಯಾದುದು ಕೂಡ ಅಲ್ಲ. I again appeal to my friends to go back to their seats. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ರೈತರು ಸಾಯುತ್ತಾ ಇದ್ದಾರೆ. ಉಳಿದ ಚರ್ಚೆಯನ್ನು ಬದಿಗೊತ್ತಿ ರೈತರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಿ.....

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ತಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಯಡಿಯೂರಪ್ಪನವರು ಏನು ಹೇಳುತ್ತಾರೆ ಕೇಳಿ. ದಿನದ ಕಲಾಪಗಳಲ್ಲಿ ಬಹಳಷ್ಟು ಕಲಾಪಗಳು ನಡೆಯಬೇಕಾಗಿದೆ. ದಯಮಾಡಿ ಕಲಾಪಗಳನ್ನು ನಡೆಸಲು ಸಹಕರಿಸಬೇಕು.

(ಗೊಂದಲ)

SRI S. R. BOMMAI,—I again appeal to all of them to go back to their seats.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ನಾವೂ ಕೂಡ ಕೈಮುಗಿದು ಕೇಳಿಕೊಳ್ಳುತ್ತೇವೆ .....

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ, ಮುಖ್ಯಮಂತ್ರಿಯವರು ತಮ್ಮ ಉತ್ತರವನ್ನು ಹೇಳಲಿ...

ಶ್ರೀಮತಿ ನಾಗರತ್ನಮ್ಮನವರೇ ತಾವಾಗಲು ಕೂಡ ಈ ಸ್ಥಾನದಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದವರು ಸದಸ್ಯರುಗಳು ಹೀಗೆ ಅಡ್ಡಿಪಡಿಸಿದರೆ ಕಾರ್ಯಕಲಾಪಗಳನ್ನು ಮಾಡುವುದು ಹೇಗೆ?

ದಯವಿಟ್ಟು ನಿಮ್ಮವರಿಗೆ ತಿಳಿಸಿ ಹೇಳಿ..... ಬಂಗಾರಪ್ಪನವರು, ಖರ್ಗೆಯವರು... ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿ ಹೋಗಿ ಕುಳಿತುಕೊಳ್ಳಬೇಕು...

(ಗೊಂದಲ)

ಶ್ರೀವಿ. ಲಕ್ಷ್ಮೀಸಾಗರ್.—ನಾನು ಮಾನ್ಯ ಸದಸ್ಯರುಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ..... ಇದು ಸರಿಯಾದ ರೀತಿಯಲ್ಲ..... ಮಾನ್ಯ ವಿರೋಧ ಪಕ್ಷದ ಸದಸ್ಯರಿಗೂ ಸಾಕಷ್ಟು ಅವಕಾಶಗಳು ಇವೆ, ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಿ.....

(ಗೊಂದಲ)

ಶ್ರೀ ಬಿ. ಎಸ್. ಕ್ಯಡಿಯೂರಪ್ಪ.—ಅಧ್ಯಕ್ಷರೇ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ.

(ಗೊಂದಲ)

(ಮಾನ್ಯ ವಿರೋಧ ಪಕ್ಷದ ಸದಸ್ಯರುಗಳು ಸಿ.ಬಿ.ಐ. ತನಿಖೆ ಆಗಲೇ ಬೇಕು ಎಂದು ಘೋಷಣೆ ಕೂಗುತ್ತಿದ್ದರು)

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು. ಈಗ ಪ್ರಶ್ನೋತ್ತರ ವೇಳೆ. ಶ್ರೀ ಟಿ. ಎಸ್. ಮಣಿಯವರು ತಮ್ಮ ಪ್ರಶ್ನೆಯನ್ನು ಕೇಳಿ.

(ಗೊಂದಲ)

ಅಧ್ಯಕ್ಷರು.—ಶ್ರೀ ಬಿ. ಜಿ. ಜವಳಿಯವರು ತಮ್ಮ ಪ್ರಶ್ನೆಯನ್ನು ಕೇಳಿ... ದಯವಾಡಿ ಮಾನ್ಯ ಸದಸ್ಯರುಗಳ ಪ್ರಶ್ನೆಗೆ ಸಚಿವರು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ...

(ಗೊಂದಲ)

ಅಧ್ಯಕ್ಷರು.—ಸಭೆಯನ್ನು ಹತ್ತು ನಿಮಿಷಗಳ ಕಾಲ ಮುಂದಕ್ಕೆ ಹಾಕಿದ್ದೇನೆ.

(ಸದನವು ೯-೩೦ ಗಂಟೆಯಿಂದ ಹತ್ತು ನಿಮಿಷಗಳ ಅವಧಿಗೆ ಮುಂದಕ್ಕೆ ಹಾಕಲ್ಪಟ್ಟಿತು)

(ಸದನವು ಮತ್ತೆ ೧೦-೪೩ ಗಂಟೆಗೆ ಸಮಾವೇಶಗೊಂಡಿತು)

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

(Congress (I) members were standing in the well shouting slogans..... "We want CBI enquiry" we want CBI enpuiry)

ಅಧ್ಯಕ್ಷರು,—ದಯವಿಟ್ಟು ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

(ಗೊಂದಲ)

ಶ್ರೀ ಬಿ. ರಾಜುಗೌಡ.—ವಿ. ಪಾಂಟ್ ಸಿ.ಬಿ.ಐ. ಎನ್‌ಕ್ವೈರಿ

MR. SPEAKER.—in view of the disorder in the House I have suspended the business except the discussion on motion of thanks to the Governor's Address and reply by the Government.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.—ದಯವಿಟ್ಟು ಗೌರ್ನರ್ ಆಡ್ರೆಸ್‌ಮೇಲೆ ಯಾರಾದರೂ ಮಾತನಾಡುವವರಿದ್ದರೆ ಮಾತನಾಡಿ. ಗೌರ್ನರ್ ಆಡ್ರೆಸ್ ಮೇಲೆ ಮಾತನಾಡುವುದಕ್ಕೆ ನಾನು ಅವಕಾಶವನ್ನು ಕೊಟ್ಟಿದ್ದೇನೆ, ಮಾತನಾಡಿ. ದಯವಿಟ್ಟು ನಿಮ್ಮ ನಿಮ್ಮ ಸ್ಥಾನಗಳಿಗೆ ಹೋಗಿ ಕೂತುಕೊಳ್ಳಿ. ಈಗ ಯಾರೂ ಮಾತನಾಡದಿದ್ದರೆ ಗೌರ್ನರ್ ಆಡ್ರೆಸ್‌ಮೇಲೆ ಉತ್ತರ ಕೊಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕರೆಯುತ್ತೇನೆ.....

(ಗೊಂದಲ)